ಪರಿಗಣಿಸಬಹುದೆಂದು ಚರ್ಚೆಯಾಗಿತ್ತು. ಆ ಸಂದರ್ಭದಲ್ಲಿ ಹಣಕಾಸಿನ ಸಚಿವರು, ಎಲ್ಲಾ ಮಾನ್ಯ ಸದಸ್ಯರು ಹೇಳಿದಾಗ ನಂತರ ಯೋಚನೆ ಮಾಡುತ್ತೇವೆಂದು ಹೇಳಿದ್ದರು. ನಂತರ ವ್ಯಾಪಾರಸ್ಥರ ಮೂಲಕ ಬಂದಿರತಕ್ಕ ಬೇಡಿಕೆ ಇದೆ; ಅವರು ಮೆಮೋರ್ಯಾಂಡಂ ಕೊಟ್ಟಿದ್ದಾರೆ ಹಾಗೆಯೇ ಗೋಧಿಜನ್ಯವಾದ ಉತ್ಪಾದನೆಗಳ ಕುರಿತಾಗಿ ಅನೇಕ ಶಾಸಕರು ಇದರ ಬಗ್ಗೆ ಮನವಿ ಕೊಟ್ಟಿದ್ದಾರೆ, ಮತ್ತು ಸಂಘಸಂಸ್ಥೆಗಳವರು ಮನವಿ ಕೊಟ್ಟಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಈ ಬಗ್ಗೆ ಚರ್ಚೆ ಮಾಡಿ ಎಂದು ಮಾನ್ಯ ಹಣಕಾಸಿನ ಸಚಿವರಿಗೆ ಸೂಚನೆ ಕೊಟ್ಟಿದ್ದಾರೆ. ನಾನು ಮಾನ್ಯ ಹಣಕಾಸಿನ ಸಚಿವರ ಜೊತೆ ಮಾತನಾಡಿ ಸದನದ ಇಡೀ ಅಭಿಪ್ರಾಯ ಹೀಗಿರುವುದರಿಂದ 4-8-12 ಶ್ರೇಣಿಯಲ್ಲಿ ಸರಳೀಕರಣ ಕಾರಣಕ್ಕಾಗಿ ಇಟ್ಟುಕೊಳ್ಳಬೇಕೆಂದು ವಿಚಾರ ಮಾಡಿದ್ದೇವೆ. ಇದನ್ನು ಹೇಗೆ ಪರಿಹರಿಸಬೇಕೆಂದು ಪ್ರಾಯಶಃ ಇನ್ನು ಒಂದೆರಡು ದಿನಗಳಲ್ಲಿ ಸಂಘಸಂಸ್ಥೆಗಳವರನ್ನು ಕರೆಸಿ ಮಾತನಾಡಿ ಒಂದು ಅಭಿಪ್ರಾಯಕ್ಕೆ ಬರಬೇಕು. ಸದನದ ಅಭಿಪ್ರಾಯ ಈ ರೀತಿ ಇದೆ ಎಂಬುದನ್ನೂ ಕೂಡ ಮಾನ್ಯ ಉಪ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತೇನೆ.

**ಊ) ಕೃಷಿ ಇಲಾಖೆ ವತಿಯಿಂದ ವೆಂಟೆಂಡ್ ಡ್ಯಾಮ್ ಕಟ್ಟುವ ಬಗ್ಗೆ.**

ಶ್ರೀ ಕುಂಬಳೆ ಸುಂದರ್‌ರಾವ್ (ಸೂರತ್ಕಲ್): ಮಾನ್ಯ ಅಧ್ಯಕ್ಷರೆ, ಕೃಷಿ ಇಲಾಖೆಯ ಕಡೆಯಿಂದ ಗ್ರಾಮಾಂತರ ಪ್ರದೇಶಗಳಲ್ಲಿ ವೆಂಟೆಡ್ ಡ್ಯಾಂ ಕಟ್ಟುವ ಕಾರ್ಯಕ್ರಮ ನಡೆಯುತ್ತಿದೆ. ಈ ಕಾರ್ಯಕ್ರಮ ಮಾಡುವಾಗ ಕೃಷಿ ಇಲಾಖೆಯಲ್ಲಿ ಇಂಜಿನಿಯರಿಂಗ್ ವಿಭಾಗ ಇಲ್ಲ. ಅವರು ಯಾವ ಸ್ಥಳ ಆಯ್ಕೆ ಮಾಡುತ್ತಾರೆ ಅದು ಪಂಚಾಯಿತಿಗೆ ಗೊತ್ತಾಗುವುದಿಲ್ಲ, ಶಾಸಕರಿಗೆ ಗೊತ್ತಾಗುವುದಿಲ್ಲ. ಎಲ್ಲಾ ಕಟ್ಟಿ ಮುಗಿಸಿದ ಮೇಲೆ ಯಾರೋ ಸುದ್ದಿ ಹೇಳಿದ ಮೇಲೆ ನಾವು ಹೋಗಿ ನೋಡುವ ಸ್ಥಿತಿ ನಮಗೆ. ನಾನು ನನ್ನ ಕ್ಷೇತ್ರದ ಎರಡು ಉದಾಹರಣೆಗಳನ್ನು ಹೇಳುತ್ತಿದ್ದೇನೆ. ಈ ಸಂದರ್ಭದಲ್ಲಿ ಮಾನ್ಯ ಸಚಿವರು ಇರುವುದು ಸಂತೋಷ. ತೋಡು ಹರಿಯುತ್ತಿರುವ ತಿರುವಿನಲ್ಲಿ ಕಟ್ಟಿದ್ದಾರೆ. ಆ ತಿರುವಿನಲ್ಲಿ ಅದು ಉಳಿಯುವುದಕ್ಕೆ ಸಾಧ್ಯವೆ? ನಾನು ಹೋಗಿ ನೋಡಿ ಕೆಲಸ ನಿಲ್ಲಿಸಿದೆ. ಆ ಊರಿನವರು ಅದನ್ನು ತೆಗೆದುಕೊಂಡು ಹೋಗುವುದಕ್ಕೆ ಬಿಡುವುದಿಲ್ಲ. ಕಡೆಗೆ ನಾನು ಕೇಳಿದೆ, ಏನಪ್ಪ ಮಾಡಬೇಕು? ನಿಮಗೆ ಇದರಿಂದ ಉಪಯೋಗವಾಗುತ್ತದೆಂದರೆ ಇದಕ್ಕೆ ಸ್ಲಾಬ್ ಹಾಕಿ ಸೇತುವೆ ಮಾಡಿಕೊಂಡು ಹೋಗಿ ಎಂದು ಹೇಳಿದೆ. ಅಲ್ಲಿ ನೀರು ಖಂಡಿತ ನಿಲ್ಲುವುದಿಲ್ಲ. ಆ ಕಂಬ ಉಳಿಯುವುದಿಲ್ಲ. ಈಗ್ಗೆ 2 ತಿಂಗಳ ಕೆಳಗೆ ಇನ್ನೊಂದು ಕಡೆ ಊರಿನವರು ಹೊಂಡ ತೆಗೆದಿದ್ದಾರೆ. ಆದುದರಿಂದ ನಾನು ಹೇಳುತ್ತೇನೆ, ಇಂಥ ಕಾರ್ಯಕ್ರಮ ಕೃಷಿ ಇಲಾಖೆಯಲ್ಲಿ ಏನು ಇದೆ ಇದರ ಬಗ್ಗೆ ನಮಗೆ ಮಾಹಿತಿ ಕೊಡಿ. ಆಗ ನಮಗೆ ತಿಳಿದುಕೊಳ್ಳುವುದಕ್ಕಾಗುತ್ತದೆ. ಎಲ್ಲಿ ಸೂಕ್ತ ಸ್ಥಳವೆಂದು ಹೇಳುವುದಕ್ಕಾಗುತ್ತದೆ. ಜನರ ಸಂಪರ್ಕ ಮಾಡಿ ಹೇಳುವುದಕ್ಕಾಗುತ್ತದೆ. ಕೃಷಿ ಇಲಾಖೆ ಶಾಸಕರಿಗೆ ಸಂಬಂಧಪಟ್ಟದ್ದಲ್ಲ, ಪಂಚಾಯಿತಿಗೆ ಸಂಬಂಧಪಟ್ಟದಲ್ಲ ನಮ್ಮದು ಸರ್ವ ಸ್ವತಂತ್ರ ಎಂಬ ರೀತಿಯಲ್ಲಿ ವ್ಯವಹಾರ ಬೇಡ.

ದಯಮಾಡಿ ಮಾನ್ಯ ಕೃಷಿ ಸಚಿವರು ಉತ್ತರಿಸಬೇಕು.

ಶ್ರೀ ಸಿ.ಬೈರೇಗೌಡ (ಕೃಷಿ ಸಚಿವರು): ಮಾನ್ಯ ಅಧ್ಯಕ್ಷರೆ, ಕೃಷಿ ಇಲಾಖೆಯಲ್ಲಿ ನಡೆಯತಕ್ಕ ಅದರಲ್ಲೂ ಈ ಭೂಸಾರ ಸಂರಕ್ಷಣಾ ಕೆಲಸಗಳು ಏನು ನಡೆಯುತ್ತಿವೆ ಅವುಗಳ ಬಗ್ಗೆ ಪ್ರತಿ ಕ್ಷೇತ್ರದ ಶಾಸಕರಿಗೆ ಮಾಹಿತಿ ನೀಡಬೇಕೆಂಬ ಸುತ್ತೋಲೆಯನ್ನು ಬಹಳ ಹಿಂದೆಯೇ ನಾವು ಕೊಟ್ಟಿದ್ದೇವೆ. ಮಾನ್ಯ ಸುಂದರರಾವ್ ಅವರ ಕ್ಷೇತ್ರದಲ್ಲಿರತಕ್ಕ ಅಧಿಕಾರಿಗಳು ಲೋಪ ಮಾಡಿರತಕ್ಕದ್ದು ನಿಜವಾಗಿದ್ದರೆ ಆ ಲೋಪಕ್ಕೋಸ್ಕರ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ. ಮತ್ತೆ ಅಲ್ಲಿ ಸರಿಯಾದ ಜಾಗದಲ್ಲಿ ಡ್ಯಾಂ ಕಟ್ಟಿಲ್ಲ, ತಿರುವಿನಲ್ಲಿ ಕಟ್ಟಿದ್ದಾರೆಂಬುದು ಏನಿದೆ ಅದು ಸರಿಯಾದುದಲ್ಲ. ಅದರ ಬಗ್ಗೆ ನಾನು ತಕ್ಷಣ ತನಿಖೆ ನಡೆಸಿ, ಮಾನ್ಯ ಸದಸ್ಯರು ಹೇಳಿರತಕ್ಕದ್ದು ನಿಜವಾದರೆ ಅದಕ್ಕೂ ಕ್ರಮ ತೆಗೆದುಕೊಳ್ಳುತ್ತೇನೆಂಬ ಮಾತನ್ನು ಹೇಳುತ್ತೇನೆ. ನಾನು ತಮ್ಮ ಮೂಲಕ ಇಡೀ ಸದನದ ಸದಸ್ಯರ ಗಮನಕ್ಕೆ ತರುವುದೇನೆಂದರೆ, ಕೃಷಿ ಇಲಾಖೆಯ ಗತಕಾಲದ ವೈಭವ ಬಹಳ ಚೆನ್ನಾಗಿದೆ. ಮಾನ್ಯ ಕಾಗೋಡುತಿಮ್ಮಪ್ಪನವರಿಗೆ ಗೊತ್ತಿದೆ. ಹಣ ಪಡೆಯುವುದಕ್ಕೋಸ್ಕರ ಕಟ್ಟಿರುವುದನ್ನು ಬಹಳ ಕಡೆ ನೋಡಿದ್ದೇನೆ. ಅದು ನೀರಿನ ಜೊತೆಗೆ ಕೊಚ್ಚಿಕೊಂಡು ಹೋಗಿ ಹಾಳುಹಂಪೆಯ ಅವಶೇಷದ ರೀತಿಯಲ್ಲಿರುವುದನ್ನೂ ಕೂಡ ನೋಡಿದ್ದೇನೆ. ಇದನ್ನು ಅನೇಕ ಮಾನ್ಯ ಸದಸ್ಯರ ಗಮನಕ್ಕೂ ಕೂಡ ತಂದಿದ್ದೇನೆ.

ಅಧ್ಯಕ್ಷರು: ಹಾಳು ಹಂಪೆಯ ಅವಶೇಷ ಉಳಿದುಕೊಂಡಿರುವುದನ್ನು ನೋಡ ಬಹುದು.

ಶ್ರೀ ಸಿ.ಬೈರೇಗೌಡ: ಕೆಲವು ಕಡೆ ಅಲ್ಪಸ್ವಲ್ಪ ಉಳಿದಿರುವುದನ್ನು ನೋಡಿದ್ದೇನೆ. ನಾನು ಮತ್ತು ಮಾನ್ಯ ಕಾಗೋಡು ತಿಮ್ಮಪ್ಪನವರು ಅವರ ಕ್ಷೇತ್ರದಲ್ಲಿ ನೋಡಿದ್ದೇವೆ. ಕೊಚ್ಚಿಕೊಂಡು ಹೋಗಿ ಏನೋ ಆಗಿರತಕ್ಕದ್ದು ಅದೆಲ್ಲಾ ಇದೆ. ಈ ಕೆಲಸವನ್ನು ಬಹಳ ಚುರುಕಾಗಿ ಮಾಡಿದ್ದಾರೆ. ಅಲ್ಲಿ ಇಲ್ಲಿ ಮಾನ್ಯ ಕುಂಬ್ಳೆ ಸುಂದರರಾವ್ ಹೇಳಿದ ರೀತಿಯಲ್ಲಿ ಲೋಪದೋಷಗಳು ಇನ್ನೂ ಕೂಡ ಇವೆ. ತಕ್ಷಣ ಕ್ರಮ ತೆಗೆದುಕೊಳ್ಳುವುದಕ್ಕೆ ನಾನು ಮುಂದಾಗುತ್ತೇನೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

**ಖ) ಸರ್ಕಾರಿ ಮುದ್ರಣಾಲಯದಲ್ಲಿ ಬೆಂಕಿ ಆಕಸ್ಮಿಕ**

ಶ್ರೀ ಜಿ.ವಿ.ಶ್ರೀರಾಮರೆಡ್ಡಿ (ಭಾಗೇಪಲ್ಲಿ): ಮಾನ್ಯ ಅಧ್ಯಕ್ಷರೆ ಬಹಳ ಪ್ರಾಮುಖ್ಯವಾದುದು. ನಮ್ಮ ವಿಧಾನಸೌಧದ ಪಕ್ಷದಲ್ಲಿ ಸರ್ಕಾರಿ ಮುದ್ರಣಾಲಯವಿದೆ. ಆ ಮುದ್ರಣಾಲಯದಲ್ಲಿ 17ನೇ ತಾರೀಖು ಆಕಸ್ಮಿಕವಾಗಿ ಬೆಂಕಿ ಬಿದ್ದಿದೆ ಎನ್ನುವ ಸುದ್ದಿಯನ್ನು ಹಬ್ಬಿಸಿದ್ದಾರೆ. ಕೇವಲ 50 ಸಾವಿರ ಮಾತ್ರ ನಷ್ಟವಾಗಿದೆಯೆಂದು ಹೇಳಿದ್ದಾರೆ. ಬೆಂಕಿ ಹತ್ತಿಕೊಂಡಿರುವುದು ಯಾವಾಗ ಅಂದರೆ,